ಶ್ರೀ ಜೆ. ಶಿವಣ್ಣ : ಆ ಹಳೆಯ ಸೇತುವೆಯು 3 ಭಾರಿ ರಿಪೇರಿಯಾಗಿದೆ, ಅದು ರಿಪೇರಿ ಮಾಡುವುದಕ್ಕಂತೂ ಆಗುವುದಿಲ್ಲ. ದಯವಿಟ್ಟು ಹೊಸ ಸೇತುವೆಯು ಆಗಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಲೋಕೋಪಯೋಗಿ ಸಚಿವರು ನೀವು ಹೇಳಿ ಸಾರ್. ಸೇತುವೆ ಮುರಿದುಕೊಂಡು ಹೋಗಿದೆ ಎಂದರೆ ಮಾನ್ಯ ಸಾರಿಗೆ ಸಚಿವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಸದಸ್ಯರು ಬಸ್ ಏತಕ್ಕಾಗಿ ಓಡಾಡುತ್ತಿಲ್ಲವೆಂದು ಕೇಳಿದ್ದಾರೆ. ನಾವು ಇಂತಹ ಕಾರಣಕ್ಕಾಗಿ ಆಗುವುದಿಲ್ಲವೆಂದು ಹೇಳಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸೇತುವೆಯು ಹಾಳಾಗಿದೆ ಎಂದರೆ ಅದರ ಬಗ್ಗೆ ಉತ್ತರವನ್ನು ಯಾರು ಕೊಡಬೇಕು ಸಾರ್?

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಲೋಕೋಪಯೋಗಿ ಸಚಿವರು ಮಾಡಿಸುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇದರ ಬಗ್ಗೆ ಉತ್ತರವನ್ನು ಯಾರು ಕೊಡಬೇಕು?

ಶ್ರೀ ಜೆ. ಶಿವಣ್ಣ : ಹಳೆಯ ಸೇತುವೆಯೂ ಖಂಡಿತವಾಗಿಯೂ ರಿಪೇರಿಯಾಗುವುದಿಲ್ಲ. ಅಲ್ಲಿ ಹೊಸ ಸೇತುವೆಯೇ ಆಗಬೇಕಾಗಿದೆ.

ಶ್ರೀ ಎನ್. ಚಲುವರಾಯಸ್ವಾಮಿ : ಬಸ್ ಸಂಚಾರ ಡಿವಿಯೇಟ್ ಆಗಿದೆ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಅದು ಆಗಿರುವುದಕ್ಕೆ ಕಾರಣ ಈ ಸೇತುವೆ ದುರಸ್ತಿಯಾಗದಿರುವುದು ಅಲ್ಲಿ ಬಸ್‌ಗಳು ಓಡಾಡುವುದಕ್ಕೆ ಆಗುವುದಿಲ್ಲವೆಂದು ನಾನು ಮಾನ್ಯ ಸದಸ್ಯರ ಗಮನಕ್ಕೆ ತಂದಿದ್ದೇನೆ. ಸದಸ್ಯರೂ ಸಹ ರಿಕ್ವೆಸ್ಟ್ ಮಾಡುತ್ತಿದ್ದಾರೆ. ಆ ಇಲಾಖೆಯವರು ಆ ರಸ್ತೆಯನ್ನು ಮಾಡಿಸಿ ಕೊಡುವುದಕ್ಕೆ ಸದಸ್ಯರು ಅವರಿಗೆ ಪತ್ರವನ್ನು ಬರೆಯಬಹುದು. ನಾವು ಸಹ ನಮ್ಮ ಇಲಾಖೆ ವತಿಯಿಂದ ಆ ಬಗ್ಗೆ ರಿಕ್ವೆಸ್ಟ್ ಮಾಡುತ್ತೇವೆ. ಈಗ ಮಾನ್ಯ ಸಚಿವರಾದ ಶ್ರೀ ರೇವಣ್ಣನವರು ಸದನದಲ್ಲಿರುವುದರಿಂದ, ಅವರೇ ಅದರ ಬಗ್ಗೆ ಒಂದು ನಿಮಿಷ ಉತ್ತರ ಹೇಳಿದರೆ ಆಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ : ಅದನ್ನು ಮಾಡುವುದರ ಬಗ್ಗೆ ಪ್ರಯತ್ನ ಮಾಡುತ್ತೇನೆ.

ವಿಷಯ: 100 ಸೇತುವೆ ಯೋಜನೆಯಡಿಯಲ್ಲಿ ಕಡೆಕಾರು–ತಡುಕೆರೆ ಹಾಗೂ ಅತ್ರಾತ್ರಿ ಬೆಳ್ಳಂಪಳ್ಳಿಯ ಸೇತುವೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು.

221(1364) ಶ್ರೀ ರಘುಪತಿ ಭಟ್ ಕೆ. (ಉಡುಪಿ) : ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರದ 100 ಸೇತುವೆ ಯೋಜನೆಯಡಿ ಉಡುಪಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಸೇತುವೆಗಳಿಗೆ ಪ್ರಸ್ತಾವನೆ ಬಂದಿದೆ;

ಆ) ಗ್ರಾಮಾಂತರ ಪ್ರದೇಶದ ಬಡ ಕೃಷಿಕರ ಶಾಲಾ ಮಕ್ಕಳು ಸಂಪರ್ಕ ಸೇತುವೆ ಇಲ್ಲದೆ ಬವಣೆಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹೌದಾಗಿದ್ದಲ್ಲಿ, ಸರ್ಕಾರ ಯಾವಾಗ ಮತ್ತು ಎಷ್ಟು ಸೇತುವೆಗಳಿಗೆ ಅನುದಾನ ಬಿಡುಗಡೆ ಮಾಡಲಾಗುವುದು;

ಈ) ಕಡೆಕಾರು–ತಡುಕೆರೆ ಹಾಗೂ ಅತ್ರಾಡಿ–ಪರೀತ ಬೆಳ್ಳಂಪಳ್ಳಿಯಲ್ಲಿ ಬೃಹತ್ ಸೇತುವೆ ನಿರ್ಮಾಣದ ಪ್ರಸ್ತಾವನೆ ಯಾವ ಹಂತದಲ್ಲಿದೆ;

ಉ) ಯಾವಾಗ ಸದರಿ ಕಾಮಗಾರಿಗಳಿಗೆ ಮಂಜೂರಾತಿ ನೀಡಿ ಅನುದಾನ ಬಿಡುಗಡೆ ಮಾಡಲಾಗುವುದು;

ಊ) ಕಡೆಕಾರು–ತಡುಕೆರೆ ಸೇತುವೆ ಮಂಜೂರಾತಿ ಬಗ್ಗೆ ಮಾನ್ಯ ಮಾಜಿ ಮುಖ್ಯಮಂತ್ರಿಗಳವರು ನೀಡಿದ ಭರವಸೆ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು) :

ಅ) ಸರ್ಕಾರದ ಆದೇಶದ ಮೇರೆಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ತೆಗೆದುಕೊಂಡ ಎರಡನೇ ಮತ್ತು ಮೂರನೇ ಹಂತದ ಸೇತುವೆಯ ಯೋಜನೆಯಲ್ಲಿ ಉಡುಪಿ ಜಿಲ್ಲೆಯಲ್ಲಿ ತೆಗೆದುಕೊಂಡ ಸೇತುವೆಯ ವಿವರಗಳು ಕೆಳಗಿನಂತಿವೆ.

ಎರಡನೇ ಹಂತದಲ್ಲಿ ಒಟ್ಟು 6 ಸೇತುವೆಗಳನ್ನು ರೂ. 570 ಲಕ್ಷಗಳ ಅಂದಾಜು ಮೊತ್ತದಲ್ಲಿ ತೆಗೆದುಕೊಳ್ಳಲಾಗಿದೆ.

ಮೂರನೇ ಹಂತದಲ್ಲಿ 6 ಸೇತುವೆಗಳನ್ನು ರೂ. 320 ಲಕ್ಷಗಳ ಅಂದಾಜು ಮೊತ್ತದಲ್ಲಿ ತೆಗೆದುಕೊಳ್ಳಲಾಗಿದೆ. ಈ ಎರಡೂ ಹಂತದಲ್ಲಿ ತೆಗೆದುಕೊಂಡ ಸೇತುವೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಬಂದಿದೆ.

ಇ) ಹಣದ ಲಭ್ಯತೆಯನ್ನಾಧರಿಸಿ ಲೋಕೋಪಯೋಗಿ ಇಲಾಖೆಯ ನಬಾರ್ಡ್ ಯೋಜನೆಯಡಿ ಈ ಬಗ್ಗೆ ಪರಿಶೀಲಿಸಲಾಗುವುದು.

ಈ) ಈ ಎರಡೂ ಸೇತುವೆಗಳು ಗ್ರಾಮೀಣ ರಸ್ತೆಗಳ ಮೇಲೆ ಬರುತ್ತವೆ. ಪಡುಕೆರೆ ಬಳಿ ಉದ್ಯಾವರ ನದಿಗೆ 400.00 ಲಕ್ಷ ರೂ. ಮೊತ್ತದಲ್ಲಿ ಸೇತುವೆ ನಿರ್ಮಾಣ ಹಾಗೂ ಅತ್ರಾಡಿ–ಪರೀಕ–ಬೆಳ್ಳಂಪಳ್ಳಿ ರಸ್ತೆಯ 2.00 ಕಿ.ಮೀ.ನಲ್ಲಿ ಸುವರ್ಣ ನದಿಗೆ 160.00 ಲಕ್ಷ ರೂ. ಮೊತ್ತದಲ್ಲಿ ಸೇತುವೆ ನಿರ್ಮಾಣದ ಪ್ರಸ್ತಾವನೆಗಳು ನಬಾರ್ಡ್‌ನ ಆರ್.ಐ.ಡಿ.ಎಫ್.

1.2ರ ಯೋಜನೆಯಡಿ ಸರ್ಕಾರದಲ್ಲಿ ಸ್ವೀಕೃತವಾಗಿದೆ. ಈ ಬಗ್ಗೆ ಸಚಿವ ಸಂಪುಟ ಉಪ ಸಮಿತಿಯಲ್ಲಿ ನಿರ್ಧಾರ ಕೈಗೊಳ್ಳಬೇಕಿದೆ.

ಊ) ಸಚಿವ ಸಂಪುಟ ಉಪ ಸಮಿತಿಯಿಂದ ಒಪ್ಪಿತವಾಗಿ ನಬಾರ್ಡ್‌ನ ಅನುಮೋದನೆ ದೊರೆತಲ್ಲಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಋ) ಈ ಸೇತುವೆಯು ಗ್ರಾಮೀಣ ರಸ್ತೆಯ ಮೇಲೆ ಬರುವುದರಿಂದ ನಬಾರ್ಡ್ ಯೋಜನೆಯಡಿ ಅನುಮೋದನೆ ದೊರೆತಲ್ಲಿ ಮಾತ್ರ ಲೋಕೋಪಯೋಗಿ ಇಲಾಖೆಯಿಂದ ಕೈಗೊಳ್ಳಬಹುದಾಗಿದೆ.

Annexure

KARNATAKA ROAD DEVELOPMENT CORPORATION LIMITED

LIST OF BRIDGES TAKEN UP IN 2ND AND 3RD PHASE BRIDGES IN UDUPI DISTRICT

Sl. No.	District/ Taluk	Location of Bridges	SH/ MDR	Cost Est. (Rs.in (Lakhs)
		II Phase		
1	Udupi	Reconstruction of Bridge at Barkur on Brahmavar Jannadi road at Ch. 2.2 in Udupi Taluk	MDR	320
2	Udupi	Construction of bridge on Pandeshwara, Mooda hadu-Benne Kudru	MDR	80.00
3	Udupi	Construction of bridge across Madisal river near Kukkehalli Perdoor-Kerje-Kokkarne road	MDR	80.00
4	Karkala	Reconstruction of bridge at 37.20 Km of Mangalore-Bajpe-Kateel-B elman road (at 37.20 Km of Mangalore-Athradi SH-67)	SH	40.00

5	Kundapur	Reconstruction of Bridge across Dali Stream at 142.00 Km of Honnali-Aresalu Halkal road (at 191.20 Km of Halgeri-Halkal SH-26)	SH	30.00
6	Kundapur	Construction of bridge across stream at 76.9 Km of Agumbe Byndoor road (at 354.516 Km of Virajpet-Byndore SH-27)	SH	20.00
		Total		**570.00**
		III Phase		
1	Udupi	Construction of bridge on Kukeehalli Baje-Hiriyadka across Suvarna River	MDR	140.00
2	Udupi	Reconstruction of bridge across stream at 27.00 Km of Siddapura-Hallihale-Jadkal road	MDR	20.00
3	Udupi	Reconstruction of bridge across stream at 28.40 Km of Halady river across Someshwra-Koteshwara road	MDR	50.00
4	Mudabidri	Construction of bridge near Sri Lakshminarayana Temple on Kotrapadi Mukkadapu road	MDR	50.00
5	Mudabidri	Construction of bridge near Mudukonaje-Kattadabailu	MDR	30.00
6	Mudabidri	Construction of bridge across Palimar river on Damaskatte-Balkunje Road	MDR	30.00
		Total		**320.00**

ಶ್ರೀ ಕೆ. ರಘುಪತಿ ಭಟ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. 100 ಸೇತುವೆಯಲ್ಲಿ ಸೆಕೆಂಡ್ ಮತ್ತು ಥರ್ಡ್ ಫೇಸ್‌ಗಳಲ್ಲಿ ಪಟ್ಟಿಗಳನ್ನು ನನಗೆ ಅನುಬಂಧದಲ್ಲಿ ಒದಗಿಸಿದ್ದಾರೆ. ಅದನ್ನು ಗಮನಿಸಿದಾಗ ನಮ್ಮ ಉಡುಪಿ ಕ್ಷೇತ್ರಕ್ಕೆ

ಒಂದೇ ಒಂದು ಸೇತುವೆಗಳು ಅದರಲ್ಲಿ ಮಂಜೂರಾಗಿಲ್ಲ. ಇದು ಗಮನಿಸಬೇಕಾದಂತಹ ವಿಚಾರವಾಗಿದೆ, ಇನ್ನೊಂದು ನಾನು ಕೇಳಿರುವುದು ಬಹಳ ಪ್ರಮುಖವಾಗಿದೆ. ಕಡೆಕಾರು–ತಡುಕೆರೆಗಳಿಗೆ ಆ ಪ್ರದೇಶಕ್ಕೆ ಒಂದು ಸೇತುವೆ ಅತ್ರಾತಿ–ಪರೀಪ–ಬೆಳ್ಳಂಪಳ್ಳಿಯಲ್ಲಿ ಒಂದು ಬೃಹತ್ ಸೇತುವೆಯ ಬಗ್ಗೆ ಕೇಳಿದ್ದೇನೆ. ಇದೆರಡರ ಪರಿಸ್ಥಿತಿಯು ವಿಚಿತ್ರವಾಗಿದೆ. ಈ ಪಡುಕೆರೆ ಮಲ್ಪೆಯ ಒಂದು ಸೇತುವೆಗೆ ಈಗಾಗಲೇ ಶಿಲಾನ್ಯಾಸ ಕಾರ್ಯಕ್ರಮ ಬಹಳ ಹಿಂದೆ ಮಾನ್ಯ ಧರ್ಮಸಿಂಗ್‌ರವರು ಲೋಕೋಪಯೋಗಿ ಸಚಿವರಾಗಿದಂತಹ ಸಂದರ್ಭದಲ್ಲಿ ಆಗ ಆ ಕಾರ್ಯಕ್ರಮವಾಗಿತ್ತು. ಆದರೆ ಆ ಕೆಲಸವು ಇವತ್ತಿನವರೆವಿಗೂ ಆಗಿಲ್ಲ. ಅದು ಬಹಳ ಪ್ರಮುಖವಾದಂತಹ ಸೇತುವೆಯಾಗಿದೆ. ಒಂದು ಕಡೆ ಸಮುದ್ರವಿದೆ, ಇನ್ನೊಂದು ಕಡೆಯಲ್ಲಿ 200 ಮೀಟರ್‌ನೊಳಗಡೆ ಈಚೆಯಲ್ಲಿ ನದಿ ಬರುವಂತಹದ್ದು ಯಾವುದೇ ಕಡಲಕೊರತೆಗಳು ಹಾಗೂ ಅಥವಾ ಸುನಾಮಿಗಳು ಅದಂತಹ ಸಂದರ್ಭದಲ್ಲಿ ಜನರಿಗೆ ಅಪಾಯದಿಂದ ಪಾರಾಗುವುದಕ್ಕೆ ಸಹಿತ ತೊಂದರೆ ಇರುವಂತಹ ಒಂದು ಪ್ರದೇಶವಾಗಿದೆ. ಅಲ್ಲಿ ಸೇತುವೆಯ ಅವಶ್ಯಕತೆ ಬಹಳಷ್ಟು ಇದೆ. ಇವತ್ತು ಉತ್ತರದಲ್ಲಿ ಖಾಲಿ ಪ್ರಸ್ತಾವನೆಯನ್ನು ಆರ್‌ಐಡಿಎಫ್–12ರಲ್ಲಿ ಇದೆ. ಉಪಸಮಿತಿಯಲ್ಲಿ ನಿರ್ಧಾರವನ್ನು ಕೈಗೊಳ್ಳಬೇಕಾಗಿದೆ ಎಂದು ಹೇಳಿದ್ದಾರೆ. ಮಾನ್ಯ ಸಚಿವರ ಹತ್ತಿರ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಮಲ್ಪೆಗೆ ದೋಣಿ ದುರಂತದ ಬಗ್ಗೆ ಬಂದಂತಹ ಸಂದರ್ಭದಲ್ಲಿ ಮೀನುಗಾರರೆಲ್ಲರೂ ಬೇಡಿಕೆಯನ್ನು ಸಲ್ಲಿಸಿದ್ದರು. ಆ ಮಲ್ಪೆ ಪಡುಕೆರೆಗೆ ಒಂದು ಸೇತುವೆಯು ಆಗಬೇಕೆಂಬುದರ ಬಗ್ಗೆ ಹೇಳಿದ್ದರು. ಅದನ್ನು ಮಾನ್ಯ ಮುಖ್ಯಮಂತ್ರಿಗಳೂ ಮೌಖಿಕವಾಗಿ ಒಪ್ಪಿಗೆಯನ್ನು ಕೊಟ್ಟಿದ್ದರು. ನಾನು ಲೋಕೋಪಯೋಗಿ ಸಚಿವರ ಹತ್ತಿರ ಇವತ್ತು ಸದನದ ಮೂಲಕ ಭರವಸೆಯನ್ನು ಕೇಳುತ್ತಿದ್ದೇನೆ. ಮಲ್ಪೆ ಪಡುಕೆರೆಗೆ ಒಂದು ಸೇತುವೆಯನ್ನು ಈ ವರ್ಷದಲ್ಲಿಯೇ ಮಂಜೂರು ಮಾಡಬೇಕೆಂದು ಕೇಳುತ್ತೇನೆ. ಇನ್ನೊಂದು ಸೇತುವೆ ಅತ್ರಾತಿ–ಪರೀತ–ಬೆಳ್ಳಂಪಳ್ಳಿಯದು.....

ಅಧ್ಯಕ್ಷರು : ಆಯಿತು, ಭಟ್‌ರವರೆ, ಈ ಪ್ರಶ್ನೆಯ ಬಗ್ಗೆನೇ 5–5– ನಿಮಿಷ ಕೇಳಿದರೆ ಹೇಗೇ? ಒಂದು ಪ್ರಶ್ನೆಗೆ ಅಲಾಟ್ ಆಗಿರುವುದು 5 ನಿಮಿಷ ಮಾತ್ರ.

ಶ್ರೀ ಕೆ. ರಘುಪತಿ ಭಟ್ : ಅತ್ರಾತಿ–ಪರೀತ–ಬೆಳ್ಳಂಪಳ್ಳಿಯ ಸೇತುವೆ ಬಗ್ಗೆ ಈಗಾಗಲೇ ಅದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಮಂಜೂರಾತಿ ಸಿಕ್ಕಿದೆ ಎಂಬುದು ನಮಗೆ ಗೊತ್ತಿರುವಂತಹ ವಿಷಯ. ಮಾನ್ಯ ಮುಖ್ಯಮಂತ್ರಿಗಳಿಂದ ಹಿಡಿದು ಕೇಂದ್ರದ ಸಚಿವರಿಗೆ ಅಭಿನಂದನೆಗಳನ್ನು ಪತ್ರಿಕೆಗಳಲ್ಲಿ ಹಾಕಿದ್ದಾರೆ. ಅದರ ಬಗ್ಗೆ ಇನ್ನೂ ಮಂಜೂರಾತಿಯಾಗಿರುವ

ಬಗ್ಗೆ ಯಾವುದೂ ಇಲ್ಲ. ಇವೆರಡು ಬಹಳ ಪ್ರಮುಖವಾದಂತಹದ್ದು. ಒಂದು ಕಡೆ ಮಾನ್ಯ ಸದಸ್ಯರಾದ ಶ್ರೀ ಜಯ ಪ್ರಕಾಶ್‌ಹೆಗ್ಡೆಯವರು ಬ್ರಹ್ಮಾವರ ಸೇರ್ಪಡೆಗೊಳ್ಳುವ ಅತ್ರಾತಿ–ಬೆಳ್ಳಂಪಳ್ಳಿ ಸೇತುವೆಯಾಗಿದೆ. ಇವರೆಡನ್ನು ಈ ವರ್ಷದಲ್ಲಿಯೇ ಮಂಜೂರಾಗುವ ಬಗ್ಗೆ ಭರವಸೆ ನೀಡಬೇಕೆಂದು ಕೇಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅದು ಅಭಿನಂದನೆ ಮಾತ್ರ ಕೊಟ್ಟಿದ್ದು. ಅದು ಇನ್ನೂ ಅನುಮೋದನೆಯಾಗಿಲ್ಲ. ಈ ಸಾರಿ ಅನುಮೋದನೆಯನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು 2 ಸೇತುವೆಯ ಬಗ್ಗೆ ಏನು ಕೇಳುತ್ತಿದ್ದಾರೆ. ಅದು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಬರುತ್ತದೆ. ಅದು ನನ್ನ ಇಲಾಖೆಗೆ ಬಂದರೆ ಅದರ ಬಗ್ಗೆ ಪ್ರಯತ್ನ ಪಡುತ್ತೇನೆ. ಗ್ರಾಮೀಣಾಭಿವೃದ್ಧಿ ಇಲಾಖೆಗೆ ಬಂದರೆ ಆ ಇಲಾಖೆಯ ಕಡೆಯಿಂದ ಮಾಡಿಸುವ ಬಗ್ಗೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ರಘುಪತಿ ಭಟ್ : ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಮಲ್ಪೆಗೆ ಬಂದಂತಹ ಸಂದರ್ಭದಲ್ಲಿ ಮಲ್ಪೆ ಪಡುಕೆರೆಯ ಸೇತುವೆಯ ಗಂಭೀರತೆಯ ಬಗ್ಗೆ ಮೀನುಗಾರರು ಅವರಿಗೆ ತಿಳಿಸಿದ್ದರು. ಈ ವರ್ಷದಲ್ಲಿ ಮಂಜೂರು ಮಾಡುತ್ತೇವೆಂಬ ಭರವಸೆಯನ್ನು ಕೊಟ್ಟಿದ್ದರು. ನಾನು ಇಲ್ಲ ಏತಕ್ಕೆ ಗಮನವನ್ನು ಸೆಳೆಯುತ್ತೇನೆಂದರೆ, ಇದು ವಾಹನ ಹೋಗುವುದಕ್ಕೆ ಮಾತ್ರ ಸಂಪರ್ಕ ಸೇತುವೆಯಲ್ಲ. 5 ಸಾವಿರಕ್ಕಿಂತಲೂ ಹೆಚ್ಚು ಜನಸಂಖ್ಯೆ ಇರುವಂತಹ ಜನರ ಪ್ರಾಣವನ್ನು ಅಪಾಯವಿರುವಂತಹ ಸಂದರ್ಭದಲ್ಲಿ ಜೀವವನ್ನು ಉಳಿಸುವುದಕ್ಕೂ ಒಂದು ಸೇತುವೆಯಾಗಿದೆ. ಒಂದು ಕಡೆ ಸಮುದ್ರವಿದೆ, 200 ಮೀಟರ್ ಒಳಗಡೆ ನದಿ ಇದೆ. ಮಾನ್ಯ ಮುಖ್ಯಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದಾರೆ. ದಯವಿಟ್ಟು ಈ ವರ್ಷವೇ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಇದು ಆರ್‌ಡಿಪಿಆರ್ ಇಲಾಖೆಗೆ ಬರುತ್ತದೆ. ಇದರ ಬಗ್ಗೆ ಮಾನ್ಯ ಸಚಿವರ ಗಮನಕ್ಕೆ ತಂದು ಮಾಡಿಸುವುದರಕ್ಕೆ ಬಗ್ಗೆ ಪ್ರಯತ್ನ ಪಡುತ್ತೇನೆ.

ವಿಷಯ : ಲೋಕೋಪಯೋಗಿ ಇಲಾಖೆಯಲ್ಲಿ ಅವಧಿಪೂರ್ಣ ಇಂಜಿನಿಯರ್‌ಗಳ ವರ್ಗಾವಣೆ.

222(982) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?